# ಶ್ರೀಮಾತೆಯವರೊಡನೆ ಮಾತುಕತೆ



ಭಕ್ತೆ ಸರಯೂ ಬಾಲಾ ದೇವಿ ಅವರ ನೆನಪುಗಳು

(ಶ್ರೀಮಾತೆಯವರು ಬಲರಾಮ ಬೋಸರ ಮನೆಗೆ ಹೋಗಿದ್ದರು. ಅವರೀಗ ವಾಪಸು ಬಂದಿದ್ದಾರೆ.)

ನನ್ನನ್ನು ಕರೆದುಕೊಂಡು ಹೋಗಲು ಗಾಡಿ ಬಂದಿದ್ದರೂ ಶ್ರೀಮಾತೆಯವರ ಮಾತನ್ನು ಮೀರಲು ಇಷ್ಟವಿರಲಿಲ್ಲ. ಶ್ರೀಮಾತೆ ನನ್ನನ್ನು ನೋಡಿ, "ಇಗೋ, ನಿನಗಾಗಿ ಬೇಗನೆ ಹಿಂತಿರುಗಿದೆ. ಪ್ರಸಾದ ತಿಂದೆಯಾ?" ಎಂದರು. ನಾನು "ಇಲ್ಲ" ಎಂದೆ. "ಅದೇಕೆ, ನಳಿನಿ ಕೊಡಲಿಲ್ಲವೇ? ಹೇಳಿಹೋಗಿದ್ದೆನಲ್ಲ?" ಎಂದರು. ನಳಿನಿ (ಲಜ್ಜೆಯಿಂದ) "ಮರೆತೆ, ಇಗೊ, ಈಗಲೇ ಕೊಡುತ್ತೇನೆ" ಎಂದಳು. ಶ್ರೀಮಾತೆ "ಇರಲಿ, ನೀನು ಕೊಡಬೇಕಿಲ್ಲ. ನಾನೇ ಕೊಡುತ್ತೇನೆ" ಎಂದರು. ನನ್ನ ಕಡೆ ತಿರುಗಿ, "ನೀನಾದರೂ ಕೇಳಿ ತೆಗೆದುಕೊಳ್ಳಬಾರದಿತ್ತೇನಮ್ಮಾ? ಇದು ನಿನ್ನ ಮನೆಯೇ" ಎಂದರು. ಆಗ ನಾನೆಂದೆ, "ಅಷ್ಟು ಹಸಿವಾಗಿದ್ದರೆ ನಾನೇ ಕೇಳಿ ತೆಗೆದುಕೊಳ್ಳುತ್ತಿದ್ದೆ."

ಶ್ರೀಮಾತೆಯವರು ಆತುರದಿಂದ ತಾವೇ ಸ್ವಲ್ಪ ಸಿಹಿ ಪ್ರಸಾದವನ್ನು ತಂದುಕೊಟ್ಟರು. ಆನಂದದಿಂದ ನಾನು ತಿಂದೆ. "ತಡೆ, ವೀಳ್ಯ ಕೊಡುತ್ತೇನೆ" ಎಂದು ಮತ್ತೆ ಒಳಗೆ ಹೋದರು. ಕರಂಡಿಕೆಯನ್ನು ತಡಕಾಡಿ ಎರಡು ವೀಳ್ಯಗಳನ್ನು ತಂದು ನನ್ನ ಕೈಲಿತ್ತರು. ನಾನು ನಮಸ್ಕರಿಸಿ ಹೊರಡಲು ಅನುಮತಿ ಕೇಳಿದೆ. ಶ್ರೀಮಾತೆಯವರು, "ಹೋಗಿ ಬಾಮ್ಮಾ, ಹೋಗಿ ಬಾ. ಮತ್ತೆ ಬಾಮ್ಮಾ. ದುರ್ಗಾ! ದುರ್ಗಾ!" ಎಂದು ಹರಸಿದರು. ಮತ್ತೆ ಮತ್ತೆ ಅದನ್ನೇ ಹೇಳಿದರು. "ಕತ್ತಲಾಗಿದೆ, ಒಬ್ಬಳೆ ಇಳಿಯಬಲ್ಲೆ. ನೀವೇನು ಬರಬೇಕಿಲ್ಲ" ಎಂದರೂ "ದುರ್ಗಾ! ದುರ್ಗಾ!" ಎನ್ನುತ್ತಾ ನಗುಮುಖದಿಂದ ಮೆಟ್ಟಿಲಂಚಿನವರೆಗೆ ಬಂದು ನಿಂತರು. ಆಗ ನಾನು, "ನೀವು ನನಗಾಗಿ ಇನ್ನು ನಿಲ್ಲಬೇಕಿಲ್ಲ. ನಾನು ಹೋಗಬಲ್ಲೆ" ಎಂದು ಹೊರಟೆ.

ಅಕ್ಷಯ ತೃತೀಯದ ದಿನದಂದು ಶ್ರೀಮಾತೆಯವರ ಬಳಿಗೆ ಹೋಗಿದ್ದೆ. ಹಿಂದೆ ಉಲ್ಲೇಖಿಸಿದ್ದ ವೃದ್ಧ ಮಹಿಳೆ ಮತ್ತು ಆಕೆಯ ಸೊಸೆ ಸ್ನಾನಾದಿಗಳನ್ನು ಮುಗಿಸಿ, ಪದ್ಧತಿಯಂತೆ ಕೆಲವು ಹಣ್ಣು ಮತ್ತು ಜನಿವಾರವನ್ನು ಶ್ರೀಮಾತೆಯವರಿಗೆ ಕೊಡಲು ಮುಂದಾದರು. ಶ್ರೀಮಾತೆ "ನನಗೇಕೆ? ಭೂದೇವನಿಗೆ ಕೊಡು" ಎಂದರು. ನಂತರ ನಮ್ಮ ಕಡೆಗೆ ತಿರುಗಿ, ಕರುಣೆಯಿಂದ, "ಇಂದು (ಅಕ್ಷಯ ತೃತೀಯದ ಪುಣ್ಯದಿನದಂದು) ನಿಮ್ಮೆಲ್ಲರಿಗೂ ಮುಕ್ತಿ ದೊರಕುವಂತೆ ಆಶೀರ್ವಾದ ಮಾಡುತ್ತೇನೆ. ಈ ಹುಟ್ಟುಸಾವುಗಳು ತುಂಬ ಯಾತನಾಮಯವಾದುವುಗಳು. ನೀವು ಅವುಗಳಿಂದ ಮುಕ್ತಿ ಪಡೆಯುವಂತಾಗಲಿ" ಎಂದು ಹರಸಿದರು.

ಕೊನೆಯ ವಾರ, ಆಶ್ವಿಜ ೧೩೧೯ (ಅಕ್ಟೋಬರ್ ೧೯೧೨)

ಅಂದು ದುರ್ಗಾಪೂಜೆ. ರಜೆಯ ದಿನ. ಮುಂಜಾನೆಯೇ ನಾನು ಶ್ರೀಮಾತೆಯವರ ಬಳಿಗೆ ಬಂದೆ. ಶ್ರೀಮಾತೆ ತುಂಬಾ ಕೆಲಸಮಾಡುತ್ತಿದ್ದಾರೆ. ಇದರ ನಡುವೆಯೇ ನನಗೆ ಕುಳಿತುಕೊಳ್ಳಲು ಹೇಳಿ, ರಾಂಚಿಯಿಂದ ಬಂದ ಭಕ್ತನನ್ನು ಕರೆಯಲು ಹೇಳಿದರು. ಆತ ತನ್ನ ಕೈಯ್ಯಲ್ಲಿ ಹೂವು, ಹಣ್ಣು, ಸೀರೆ ಮತ್ತು ಬಟ್ಟೆಯಿಂದ ತಯಾರಿಸಿದ ನಕಲಿ ಗುಲಾಬಿ ಮಾಲೆಯನ್ನು ಹಿಡಿದು ಮೇಲೇರಿ ಬಂದನು. ಆತನು ಒತ್ತಾಯ ಮಾಡಿದ್ದಕ್ಕೆ ಶ್ರೀಮಾತೆ ಆ ಮಾಲೆಯನ್ನು ಕೊರಳಲ್ಲಿ ಧರಿಸಿದರು. ಹಾರದಲ್ಲಿದ್ದ ಲೋಹದ ಕಂಬಿ ಶ್ರೀಮಾತೆಗೆ ಚುಚ್ಚಬಹುದು ಎಂದು ಗೋಲಾಪ್ ಮಾ ಚೀತ್ಕಾರ ಮಾಡತೊಡಗಿದಳು. ಭಯಗೊಂಡ ಭಕ್ತನನ್ನು ಕಂಡು ಕರುಣಾಮಯಿ ಮಾತೆ, "ಇಲ್ಲ ಇಲ್ಲ. ಬಟ್ಟೆಯ ಮೇಲೆ ಹಾಕಿಕೊಂಡಿದ್ದೇನೆ, ಚುಚ್ಚುತ್ತಿಲ್ಲ" ಎಂದರು. ನಂತರ ಭಕ್ತ ನಮಸ್ಕರಿಸಿ ಹಿಂತಿರುಗಿದನು.

ನಂತರ ಶ್ರೀಮಾತೆಯವರ ಜೊತೆಗೆ ನಾನೂ ಸಹ ಪ್ರಸಾದ ಸ್ವೀಕರಿಸಲು ಕುಳಿತೆ. ನಾನು ತಂದಿದ್ದ ಹಣ್ಣು ಮತ್ತು ಸಿಹಿತಿಂಡಿಗಳನ್ನು ನೋಡಿ ಶ್ರೀಮಾತೆ, "ಶ್ರೀರಾಮಕೃಷ್ಣರಿಗೆ ಅರ್ಪಣೆ ಆಯಿತೇ?" ಎಂದರು. ನಂತರ ಅದರಿಂದ ಒಂದು ದ್ರಾಕ್ಷಿಯನ್ನು ತೆಗೆದು ತಿಂದು, "ಆಹಾ! ಬಹಳ ಸಿಹಿಯಾಗಿದೆ" ಎಂದರು. ಹಿಂದೆ ನಾನು ಕೊಟ್ಟಿದ್ದ ಸೀರೆಯನ್ನು ಶ್ರೀಮಾತೆ ಇಂದು ಉಟ್ಟಿದ್ದರು. ಅದನ್ನು ತೋರಿಸುತ್ತಾ, "ನೋಡಮ್ಮಾ, ನಿನ್ನ ಸೀರೆ ಉಟ್ಟು ಉಟ್ಟು ಕಪ್ಪಾಗಿದೆ" ಎಂದರು. ನನ್ನಂತಹ ಅಯೋಗ್ಯ ಮಗಳ ಮೇಲಿರುವ ಅವರ ಸ್ನೇಹಪ್ರೀತಿಗಳನ್ನು ನೋಡಿ, ನಾನು ಅವಾಕ್ಕಾದೆ! (ಮುಂದುವರಿಯುವುದು)